**ಸಹಜೋಕ್ತಿಯ ಹಾಗಿರುವ ಪಾಟೀಲರು**

**ಓ.ಎಲ್. ನಾಗಭೂಷಣ ಸ್ವಾಮಿ.**

ಯಾವ ಬರವಣಿಗೆಯೂ ಬೇಡ, ಓದುವುದೂ ಬೇಡ, ಜನರನ್ನು ನೋಡುವುದೂ ಬೇಡ ಅನ್ನುವಂಥ ನಿರಾಸಕ್ತಿ ಕವಿದು ಬಿದ್ದಿರುವ ಹೊತ್ತಿನಲ್ಲಿ ಗೆಳೆಯ ರಾಘವೇಂದ್ರ ಪಾಟೀಲರ ಬಗ್ಗೆ ಬರೆದು ಮಾಮೂಲಾಗಲು ಪ್ರಯತ್ನಪಡುತ್ತಿದ್ದೇನೆ. ಸಾಹಿತ್ಯ, ಮನಸಿಗೆ ಮದ್ದು ಎಂದು ಸಾಹಿತ್ಯ ಪ್ರಿಯರು ಕೊಚ್ಚಿಕೊಳ್ಳುವುದಿದೆ. ಅಷ್ಟೇನೂ ನಿಜವಲ್ಲ. ಆದರೆ ಗೆಳೆಯ ಸಾಹಿತಿಯ ಬಗ್ಗೆ ಬರೆಯುತ್ತ ಮನಸ್ಸು ನಿಧಾನವಾಗಿ ಮುದಗೊಳ್ಳುತ್ತಿರುವುದು ನಿಜ. ಬಹುಶಃ ಟಾಲ್‌ಸ್ಟಾಯ್ ಅದಕ್ಕೇ ಹೇಳಿದ್ದು ಅಂತ ಕಾಣುತ್ತದೆ–ಸಾಹಿತ್ಯ ಕೃತಿಗಿಂತ ಅದನ್ನು ಸೃಷ್ಟಿಸುವ ಮನಸ್ಸು ನನಗೆ ಮುಖ್ಯ ಎಂದು.

ನಿಜಕ್ಕೂ ರಾಘವೇಂದ್ರ ಪಾಟೀಲರ ಬಗ್ಗೆ ಬರೆಯುವುದು ಕಷ್ಟವಾಗುತ್ತಿದೆ. ಅವರು ಈ ಮೂವತ್ತು ವರ್ಷಗಳಲ್ಲಿ ನನ್ನ ಬಗ್ಗೆ ಎಷ್ಟೊಂದು ಅಭಿಮಾನ, ಪ್ರೀತಿ, ಸ್ನೇಹ ತೋರಿದ್ದಾರೆ, ಎಷ್ಟೊಂದು ಸಾರಿ ಅವರ ಮನೆಗೆ ಹೋಗಿದ್ದೇನೆ, ಅವರೂ ಬಂದಿದ್ದಾರೆ ನಮ್ಮ ಮನೆಗೆ, ಎಷ್ಟೊಂದು ಸಂಜೆಗಳನ್ನು ಸ್ನೇಹಪೂರ್ಣವಾಗಿ ಕಳೆದಿದ್ದೇವೆ, ಆದರೂ ನನಗೆ ಪಾಟೀಲರು ಗೊತ್ತಿರುವುದು ಬಹಳವೇ ಸ್ವಲ್ಪ ಅನಿಸುತ್ತಿದೆ ಬರೆಯುವುದಕ್ಕೆ ಕೂತಾಗ.

ನನ್ನ ಓರಗೆಯ ಹಲವು ಲೇಖಕರ ಬಗ್ಗೆ 'ಬರೆಯಬಹುದಾದದ್ದು' ಬಹಳ ಇದೆ. ಅವರವರ ವ್ಯಕ್ತಿ ವೈಚಿತ್ರ್ಯವನ್ನು ಮೆಚ್ಚಿಕೊಂಡೋ ಉತ್ಪ್ರೇಕ್ಷಿಸಿಯೋ ತಮಾಷೆಯಾಗಿಯೋ ಬರೆಯಬಹುದು. ಪಾಟೀಲರಲ್ಲಿ ಅಂಥ ವೈಚಿತ್ರ್ಯ ನೆನಪಿಸಿಕೊಂಡರೂ ನೆನಪಾಗದು. ಉತ್ಪ್ರೇಕ್ಷೆಗೆ ಒಳಗಾಗುವಂಥ ವ್ಯಕ್ತಿತ್ವವೂ ಅವರದ್ದಲ್ಲ. ಪಾಟೀಲರು ಹೀಗಲ್ಲ ಇನ್ನು ಹೇಗೋ ಇರಬಹುದಾಗಿತ್ತು ಅನ್ನುವ ಕೊಂಕೂ ತೆಗೆಯಲಾರೆ. ಸಹಜೋಕ್ತಿಯ ಹಾಗಿರುವ ಪಾಟೀಲರ ಬಗ್ಗೆ ಏನು ಬರೆಯಲಿ.

ಸಹಜವಾಗಿ ತಾವು ಇರುವುದೇ ಹೀಗೆ ಅನ್ನುವ ಹಾಗೆ ಇದ್ದುಬಿಡುವವರು ಅಪರೂಪ. ಅದೇ ಅವರ ಮುಖ್ಯ ಗುಣ ಅಂತಲೂ ಅನ್ನಿಸುತ್ತಿದೆ. ಯಾಕೆಂದರೆ ತಾವು ಇನ್ನೇನೋ ಆಗಬೇಕಾಗಿತ್ತು, ಇನ್ನೇನೋ ಮಾಡಬೇಕಾಗಿತ್ತು, ಇನ್ನೇನೋ...ಇತ್ಯಾದಿಗಳನ್ನೇ ನನ್ನ ಮನಸ್ಸಿನ ಮೇಲೆ ಒತ್ತುವವರೇ ಹೆಚ್ಚು ಜನ ಕಂಡಿರುವಾಗ ಅಂಥ ಯಾವ 'ಇನ್ನೇನೋ...' ಸೂಚನೆಯನ್ನೂ ತೋರದೆ ಇರುವ ಪಾಟೀಲರು ಅಪರೂಪವೇ ಸರಿ.

ಹಾಗೆ ನೋಡಿದರೆ ಪಾಟೀಲರು ಮಾತಾಡುವುದಕ್ಕಿಂತ ಕೇಳಿಸಿಕೊಳ್ಳುವುದೇ ಹೆಚ್ಚು. ಆಪ್ತ ಮಿತ್ರಗೋಷ್ಠಿಗಳಲ್ಲಿ ಅವರೊಡನೆ ಎಷ್ಟೊಂದು ಮಾತಾಡಿದ್ದೇನೆ, ಆದರೆ ಅವರು ಮಾತಾಡಿಯೇ ಇಲ್ಲ ಅನ್ನಿಸುತ್ತದೆ. ಕನ್ನಡದ ಲೇಖಕರ ಬಳಗದಲ್ಲಿ ಅವರು ಹಾಗಂದರು, ಹೀಗಂದರು ಅನ್ನುವ ಮಾತುಗಳು ಸಹಜವಾಗಿಯೇ ಕಿವಿಗೆ ಬೀಳುತ್ತವೆ. ಆದರೆ ಪಾಟೀಲರು ಹೀಗಂದರು ಅನ್ನುವ ಮಾತು ನನಗೆಂದೂ ಕೇಳಿಲ್ಲ. ನನ್ನ ಇನ್ನೊಬ್ಬ ಹಿರಿಯ ಗೆಳೆಯ ಶ್ರೀನಿವಾಸರಾಜು ಕೂಡಾ ಹೀಗೆಯೇ ಇದ್ದವರು. ರಾಜು ಅವರಂತೆಯೇ ಪಾಟೀಲರು ಕೂಡಾ 'ಸಲ್ಲದ' ಮಾತನ್ನು ಎಂದೂ ಆಡುವವರಲ್ಲ. ಎಲ್ಲರ ಮಾತನ್ನೂ ಕೇಳಿಸಿಕೊಳ್ಳುವವರು ಇಬ್ಬರೂ. ಮಾತಿನ ದುಂದುಗಾರಿಕೆ, ಅಪವ್ಯಯ ಇವೇ ಹೆಚ್ಚಾಗಿರುವ ಈ ಕಾಲದಲ್ಲಿ ಹೀಗೆ ಎಷ್ಟು ಜನರ ಬಗ್ಗೆ ಹೇಳಲು ಸಾಧ್ಯವೋ!

ರಾಘವೇಂದ್ರ ಪಾಟೀಲರನ್ನು ನೆನೆದುಕೊಂಡಾಗ ತಕ್ಷಣ ಮನಸ್ಸಿನಲ್ಲಿ ಮೂಡುವುದು ಅವರ ಧ್ವನಿ. ಮತ್ತೆ ಅವರು ಆಶ್ಚರ್ಯವನ್ನು ತೋರುವ ರೀತಿ. ಜೊತೆಗೆ ನಗುಮುಖ. ಲಿಕ್ಕೆ ಪ್ರತ್ಯಯಗಳು ಮತ್ತೆ ಊ ಕಾರಗಳು. 'ಬರೀಲಿಕ್ಕೆ ಆಗ್ತದನೋ ಇಲ್ಲೋ ಅಂತಿದ್ದೆ', ಹೋಗಲಿಕ್ಕೆ, ಮಾಡಲಿಕ್ಕೆ, ನೋಡಲಿಕ್ಕೆ, ಬರೂದಿಲ್ಲೇನು, ಆಗೂದಿಲ್ಲಾ ಇತ್ಯಾದಿ ತುಂಡು ಪದಗಳು, ವಾಕ್ಯಗಳು, ಅವನ್ನು ಅವರು ಉಚ್ಚರಿಸುವ ರೀತಿ ಅವರ ಹೆಸರಿನ ಜೊತೆಗೇ ಮನಸ್ಸಿನ ಕಿವಿಗೆ ಕೇಳುತ್ತವೆ.

ಯಾಕೋ ಗೊತ್ತಿಲ್ಲ 'ಸಾವಕಾಶ' ಅನ್ನುವ ಮಾತು ಕೇಳುತ್ತಿದೆ. ಬಹುಶಃ ಪಾಟೀಲರು ಆ ಮಾತನ್ನು ಹೆಚ್ಚಾಗಿ ಬಳಸುತ್ತಾರೆ ಅನ್ನುವ ಕಾರಣಕ್ಕಿರಬಹುದು. ಸಾವಕಾಶ ಪಾಟೀಲರ ಮುಖ್ಯ ಲಕ್ಷಣವೇ ಇದ್ದೀತು. ಅವರ ಮಾತು, ಊಟ, ಓದು, ಬರವಣಿಗೆ ಎಲ್ಲದರಲ್ಲೂ ಸಾವಕಾಶವಿದೆ. ಮೂರು ದಶಕಕ್ಕೂ ಹೆಚ್ಚು ಕಾಲ ಅವರು ಊರಿಕೊಂಡಿರುವ ಮಲ್ಲಾಡಿಹಳ್ಳಿಯ ವಾತಾವರಣವೂ ಈ ಸಾವಕಾಶಕ್ಕೆ ಕಾರಣವಿರಬಹುದು. ಅವರ ಎಳವೆಯ ಬೆಳಗಾವಿ ಜಿಲ್ಲೆ, ಓದಿದ ಧಾರವಾಡ, ಕೆಲಸ ಮಾಡಿದ ಮಲ್ಲಾಡಿಹಳ್ಳಿ ಎಲ್ಲವೂ ಸಾವಕಾಶ ಲಯದ ಊರುಗಳೇ. ರಾಜಧಾನಿಯೋ ದೊಡ್ಡ ಪಟ್ಟಣವೋ ಪಾಟೀಲರ ಕಾರ್ಯಕ್ಷೇತ್ರವಾಗಿದ್ದಿದ್ದರೆ ಈ ಸಾವಕಾಶ ಇರುತ್ತಿರಲಿಲ್ಲವೇನೋ. ನಿವೃತ್ತಿಯ ನಂತರ ಬೆಂಗಳೂರೋ ಧಾರವಾಡವೋ ಅನ್ನುವ ಚಿಂತೆ ಬಹು ಕಾಲ ಮಾಡಿ ಕೊನೆಗೆ ಧಾರವಾಡವನ್ನೇ ಅವರು ಆರಿಸಿಕೊಂಡದ್ದೂ ಅವರೊಳಗಿರುವ ಸಾವಕಾಶದ ಕಾರಣದಿಂದಲೇ ಇರಬೇಕು. ಪಾಟೀಲರ ಬರವಣಿಗೆಯೂ ಸಾವಕಾಶ ಅರಳಿದ ಬರವಣಿಗೆಯೇ. ಧಾವಂತವಿಲ್ಲದ ಬರವಣಿಗೆ.

ಸಾವಕಾಶ ಸೋಮಾರಿತನವಲ್ಲ. ಮಲ್ಲಾಡಿಹಳ್ಳಿಗೆ ಎಷ್ಟೋ ಸಾರಿ ಹೋದಾಗಲೆಲ್ಲ ಅವರು ಪ್ರಿನ್ಸಿಪಾಲರಾಗಿ, ಆಡಳಿತಾಧಿಕಾರಿಯಾಗಿ ಕೆಲಸಮಾಡುವ ಕ್ಷಣಗಳನ್ನು ಕಂಡು ಪಾಟೀಲರದ್ದು ದರ್ಪವಿಲ್ಲದ ಶಿಸ್ತು, ಅವರವರಿಗೆ ಅವರವರ ಕೆಲಸ ವಹಿಸಿಕೊಟ್ಟು ಉಸ್ತುವಾರಿ ನೋಡಿಕೊಳ್ಳುವ ಗೌರವ-ಸ್ಥ ಹಿರಿಯನ ಹಾಗೆ ಅನ್ನಿಸಿ ಆಶ್ಚರ್ಯಪಟ್ಟಿದ್ದೇನೆ. ನಮ್ಮ ಮನೆ ನಮ್ಮ

ಬದುಕಿನ ಕೇಂದ್ರವಾಗಿರುವ ಹಾಗೇ ನಮ್ಮನ್ನೆಲ್ಲ ಸಮಾಜಕ್ಕೆ ಸೇರುವಂತೆ ಮಾಡುವ ಶಾಲೆ ಕೂಡಾ ಅಷ್ಟೇ ಮುಖ್ಯ ಕೇಂದ್ರ. ಈ ಅರಿವು ನಮ್ಮಲ್ಲಿ ಕಾಣೆಯಾಗಿಬಿಟ್ಟಿದೆ. ಮಲ್ಲಾಡಿಹಳ್ಳಿಯಂಥ ಪುಟ್ಟ ಊರಿನಲ್ಲಿ ಪಾಟೀಲರ ವಿದ್ಯಾಸಂಸ್ಥೆಯೇ ಏಕೈಕ ಸಾಮಾಜಿಕ ಚಟುವಟಿಕೆಯ ಕೇಂದ್ರ. ಅಲ್ಲಿಗೆ ಬರುವ ಮಕ್ಕಳೋ ವಸ್ತು ರೂಪದಲ್ಲಿ ಮಾತ್ರ ಆಧುನಿಕತೆಯ ಪರಿಚಯವಿರುವ, ಮನೋಧರ್ಮದಲ್ಲಿ ಇನ್ನೂ ಹಲವು ಶತಮಾನ ಹಿಂದಿರುವ ಪ್ರದೇಶಗಳ ಸೌಲಭ್ಯವಂಚಿತ ಮಕ್ಕಳು. ಇಂಥವರಿಗೆ ತಕ್ಕ ಶಿಕ್ಷಣ ದೊರೆಯಬೇಕು, ಅಷ್ಟೇ ಅಲ್ಲ ಶಾಲೆಯ ಬದುಕು ಅವರನ್ನು ಸಮಾಜಕ್ಕೆ ಸಲ್ಲುವ ವ್ಯಕ್ತಿಗಳನ್ನಾಗಿಸಬೇಕು, ಜೊತೆಗೇ ಮನಸ್ಸಿನ ವಿಕಾಸವೂ ಆಗಬೇಕು–ಕಳೆದ ಹಲವು ವರ್ಷಗಳಲ್ಲಿ ಪಾಟೀಲರು ಆಡಳಿತಾಧಿಕಾರಿಗಳಾದ ನಂತರ ಅಲ್ಲಿ ಪ್ರತಿವರ್ಷವೂ ನಡೆಯುತ್ತಿರುವ ರಂಗೋತ್ಸವ ನನಗೆ ತೀರ ಮುಖ್ಯವಾಗಿ ಕಂಡಿದೆ. ಸುತ್ತಮುತ್ತಲ ಹಳ್ಳಿಗಳ ಜನರೆಲ್ಲ ಉತ್ಸಾಹದಿಂದ ಪಾಲ್ಗೊಳ್ಳುವ, ಸಂತೋಷಪಡುವ, ಹೊಸತನ್ನು ಅರಿಯುವ ಈ ರಂಗೋತ್ಸವದ ಪ್ರಾಮುಖ್ಯ ದೊಡ್ಡ ಊರುಗಳಲ್ಲಿರುವವರಿಗೆ ಸುಲಭವಾಗಿ ಅರ್ಥವಾಗದು. ಪರೀಕ್ಷೆಗೆ ಕಲಿಯುವ ಪಾಠಗಳಿಗಿಂತ ಮನಸ್ಸನ್ನು ಪೂರ್ತಿ ತೊಡಗಿಸಿಕೊಳ್ಳುವ ಸಿನಿಮಾ ಮತ್ತೆ ನಾಟಕಗಳ ಪ್ರಭಾವ ಬಲು ದೊಡ್ಡದು. ಶಾಲೆಯನ್ನು ಹೀಗೆ ಊರಿನ ಜೀವನಾಡಿಯಾಗಿ ವಿಸ್ತರಿಸಿರುವ ಪಾಟೀಲರ ಸಾಧನೆ ಅವರ ಬರವಣಿಗೆಯಷ್ಟೇ, ಕೆಲವೊಮ್ಮೆ ಅದಕ್ಕಿಂತ ಹೆಚ್ಚಿನದು ಅನಿಸುತ್ತದೆ.

ಶ್ರೀನಿವಾಸರಾಜು ಮತ್ತೆ ನೆನಪಾಗುತ್ತಾರೆ. ಪಾಟೀಲರು ಕೂಡಾ 'ಸಂವಾದ' ಪತ್ರಿಕೆಯನ್ನು ನಡೆಸಿ, ಆನಂದಕಂದ ಗ್ರಂಥಮಾಲೆಯನ್ನು ಆರಂಭಿಸಿ ಎಷ್ಟೋ ಹಳೆಯ ಹೊಸ ಲೇಖಕರನ್ನು ಓದುಗರಿಗೆ ತಲುಪಿಸಿದವರು. ಶ್ರೀನಿವಾಸರಾಜು ಅವರಂತೆಯೇ ಪಾಟೀಲರೂ ತಮ್ಮ ಬರವಣಿಗೆ, ಪ್ರಕಾಶನ, ಸಾಮಾಜಿಕ ಚಟುವಟಿಗೆಗಳನ್ನು ಮತ್ತೆ ಯಾವುದಕ್ಕೋ ಏಣಿ ಮಾಡಿಕೊಂಡವರಲ್ಲ, ಅವಕ್ಕೆ ಪ್ರತಿಫಲವಾಗಿ ಬೇರೆ ಏನನ್ನೋ ಅಪೇಕ್ಷಿಸಿದವರಲ್ಲ.

ಲಯ, ಮಾಯಿಯ ಮುಖಗಳು, ದೇಸಗತಿ ಇವು ನನಗೆ ಬಹಳ ಇಷ್ಟವಾದ ಪಾಟೀಲರ ಕಥೆಗಳು. ಪಾಟೀಲರು ನಿಜದಲ್ಲಿ ಹೇಗೋ ಈ ಕಥೆಗಳಲ್ಲೂ ಹಾಗೆ ತಾವು ಎದ್ದು ಕಾಣದೆ ತಾವು ಕಂಡ, ಕಲ್ಪಿಸಿದ ಲೋಕವನ್ನು ನಮಗಾಗಿ ಕಟ್ಟಿಕೊಟ್ಟಿದ್ದಾರೆ. ಅಥವಾ ಕನ್ನಡದ ಕಥೆಯ ಒಂದು ಭಾಗ ಪಾಟೀಲರ ಮೂಲಕ ಹೀಗೆ ರೂಪಪಡೆದಿದೆ. ನನ್ನ ತಲೆಮಾರಿನ ದೇವನೂರು, ಕುಂವೀ, ಅಮರೇಶ, ಪಾಟೀಲ ಇವರೆಲ್ಲ ಸೃಷ್ಟಿಸಿರುವ ಕನ್ನಡ ಕಥೆ ನನ್ನದಾಗಿರುವುದು ಸೌಭಾಗ್ಯವೇ ಸರಿ.

ಪಾಟೀಲರ ಜೊತೆಗೇ ಕವಿ ಚಂದ್ರಶೇಖರ ತಾಳ್ಯ ನೆನಪಾಗುತ್ತಾರೆ. ನಾವು ಮೂವರು ಎಷ್ಟೋ ಊರುಗಳಿಗೆ ಒಟ್ಟಿಗೆ ಹೋಗಿದ್ದೇವೆ, ಎಷ್ಟೋ ಸಮಾರಂಭಗಳಲ್ಲಿ ಒಟ್ಟಿಗೆ ಪಾಲ್ಗೊಂಡಿದ್ದೇವೆ, ಎಷ್ಟೋ ಸ್ನೇಹಮಯ ಸಂಜೆಗಳನ್ನು ಒಟ್ಟಿಗೆ ನಮ್ಮೊಳಗೆ ಸೇರಿಸಿಕೊಂಡಿದ್ದೇವೆ. ಕವಿ–ಕತೆಗಾರ–ವಿಮರ್ಶಕರ ಬಗ್ಗೆ ನಾವೇ ಆ ಮೂವರ ಪ್ರತಿನಿಧಿಗಳು ಅನ್ನುವ ಹಾಗೆ ತಮಾಷೆಯ ಜಗಳವಾಡಿಕೊಂಡಿದ್ದೇವೆ. ತತ್ವಶಾಸ್ತ್ರ, ತರ್ಕ ಓದಿ, ಓದಿಸಿ ಆದರೆ ತತ್ವಶಾಸ್ತ್ರಕ್ಕೂ ತರ್ಕಕ್ಕೂ ನಿಲುಕದಂತೆ ಇರುವ ತಾಳ್ಯ, ಸಭ್ಯ, ಸ್ವಚ್ಛ, ಸ್ನೇಹಮಯ ಹಾಸ್ಯ ಪ್ರವೃತ್ತಿಯ ಪಾಟೀಲ ಇವರೊಡನೆ ಕಳೆದ ಹೊತ್ತು ನನ್ನ ಬದುಕಿನ ಅತ್ಯಂತ ಸುಂದರ ಸುಖದ ಹೊತ್ತಾಗಿ ನೆನಪಿನಲ್ಲಿ ಉಳಿದಿದೆ. ಸಂಸಾರ ವಿಷವೃಕ್ಷದಲ್ಲಿ ಸಿಹಿಯಾದ ಹಣ್ಣು ಎರಡೇ, ಒಳ್ಳೆಯವರ ಸಹವಾಸ ಮತ್ತೆ ಕಾವ್ಯಾಸ್ವಾದ ಅನ್ನುತ್ತದೆ ಸಂಸ್ಕೃತದ ಸುಭಾಷಿತ. ಪಾಟೀಲರು, ನಾನು ಕಂಡಾಗಲೆಲ್ಲ ಅವರ ಜೊತೆಗೇ ಕಾಣಿಸಿಕೊಳ್ಳುವ ತಾಳ್ಯರು ಈ ಎರಡೂ ಸಿಹಿ ಹಣ್ಣುಗಳನ್ನು ಧಾರಾಳವಾಗಿ ನೀಡಿದ್ದಾರೆ ನನಗೆ. ಕೃತಜ್ಞ.

ಇಗೋ ಈಗ ಪಾಟೀಲರೊಡನೆ, ತಾಳ್ಯರೊಡನೆ ಆಡಿದ ಸಾವಿರ ಮಾತುಗಳು ನೆನಪಿಗೆ ಬರುತ್ತಿವೆ. ಅದನ್ನೆಲ್ಲ ಬರೆದರೆ ಆತ್ಮಕಥೆಯಾದೀತು, ಬೇಡ. ಪಾಟೀಲರು, ಅವರ ಶ್ರೀಮತಿಯವರು ನಾನು ಅವರ ಮನೆಯವನೇ ಅನ್ನುವಷ್ಟು ವಿಶ್ವಾಸದಿಂದ ಕಂಡಿದ್ದಾರೆ, ಅವರ ಮನೆಯಲ್ಲಿ ನನ್ನ ಮನೆಯಲ್ಲಿರುವಷ್ಟೇ ನಿರಾಳವಾಗಿ ಇರುವಂತೆ ನೋಡಿಕೊಂಡಿದ್ದಾರೆ. ಇದಕ್ಕಿಂತ ಹೆಚ್ಚು ಹೇಳಲಾರೆ.

ತಮ್ಮೊಳಗೆ ತಾವಿದ್ದುಕೊಂಡು ಲೋಕಕ್ಕೆ ಎಷ್ಟು ಸಲ್ಲಬೇಕೋ ಅಷ್ಟು ಮಾತ್ರ ಸಂದು, ತಾವು ಲೋಕಕ್ಕೆ ಎಷ್ಟು ಸಲ್ಲಿಸಬೇಕೋ ಅಷ್ಟನ್ನು, ಇನ್ನೂ ಹೆಚ್ಚನ್ನು ನಿರ್ವಂಚನೆಯಿಂದ ಸಲ್ಲಿಸಿದ ನಾನು ಬಲ್ಲವರಲ್ಲಿ ಪಾಟೀಲರು ಒಬ್ಬರು. ಇಂಥವರ ಸಂತತಿ ಸಾವಿರವಾಗಲಿ ಅನ್ನುವ ಹಾರೈಕೆಯಲ್ಲದೆ ಇನ್ನೇನು ಹೇಳಲು ಸಾಧ್ಯ.